**SUBJECT CODE: 398**

# 2020

# Corporate Finance, Business Economics and Taxation (Paper VII)

| Time : 3 Hours | Maximum Marks : 300 |
|---|---|

# ಕಾರ್ಪೊರೇಟ್ ಹಣಕಾಸು, ವಾಣಿಜ್ಯ (ವ್ಯವಹಾರ) ಅರ್ಥಶಾಸ್ತ್ರ ಮತ್ತು ತೆರಿಗೆ ವಿಧಿಸುವುದು (ಪತ್ರಿಕೆ VII)

| ಸಮಯ : 3 ಗಂಟೆಗಳು | ಗರಿಷ್ಠ ಅಂಕಗಳು : 300 |
|---|---|

## SPECIFIC INSTRUCTIONS

**ನಿರ್ದಿಷ್ಟ ಸೂಚನೆಗಳು**

*(i)* Candidates have to attempt all questions.

**ಅಭ್ಯರ್ಥಿಗಳು ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಬೇಕು**

*(ii)* Marks carried by each question are indicated at its end.

**ಪ್ರತಿ ಪ್ರಶ್ನೆಯ ಕೊನೆಯಲ್ಲಿ ಅದಕ್ಕೆ ನೀಡಲಾಗುವ ಅಂಕಗಳನ್ನು ನಮೂದಿಸಲಾಗಿದೆ.**

**1.** Variation in capitalization may be inferred as a force to ease tension on giving enterprise a tool to pursue its purpose. In this context, discuss various reasons for changes in capitalization. (Not more than **500** words)

ಬಂಡವಾಳೀಕರಣದ ವ್ಯತ್ಯಯವನ್ನು ಉದ್ದಿಮೆಯು ತನ್ನ ಗುರಿಸಾಧನೆಗೆ ಬಿಗುವು ಕಡಿಮೆಗೊಳಿಸುವ ಸಾಧನವೆಂದು ಅರ್ಥೈಸಬಹುದು. ಈ ಸಂದರ್ಭಕ್ಕನುಸಾರವಾಗಿ ಬಂಡವಾಳೀಕರಣದ ಬದಲಾವಣೆಗಳಿಗೆ ವಿವಿಧ ಕಾರಣಗಳನ್ನು ಚರ್ಚಿಸಿ. (**500** ಪದಗಳಿಗೆ ಮೀರದಂತೆ ಉತ್ತರಿಸಿ) [30]

**2.** Encouragement of micro finance is inevitable for faster economic growth – Elucidate.(Not more than **500** words)

ಆರ್ಥಿಕ ಬೆಳವಣಿಗೆಯು ತೀವ್ರವಾಗಲು ಸೂಕ್ಷ್ಮ ಹಣಕಾಸಿನ ಪ್ರೋತ್ಸಾಹ ಅನಿವಾರ್ಯ – ವಿಶದೀಕರಿಸಿ. (**500** ಪದಗಳಿಗೆ ಮೀರದಂತೆ ಉತ್ತರಿಸಿ) [30]

**3.** Can Union Government of India levy taxes on only agricultural income? Justify your answer. (Not more than **250** words)

ಭಾರತದ ಕೇಂದ್ರ ಸರ್ಕಾರವು ತೆರಿಗೆಗಳನ್ನು ಕೃಷಿ ಆದಾಯದ ಮೇಲೆ ಮಾತ್ರ ವಿಧಿಸುತ್ತಿದೆಯೇ? ನಿಮ್ಮ ಉತ್ತರವನ್ನು ಸಮರ್ಥಿಸಿ (**250** ಪದಗಳಿಗೆ ಮೀರದಂತೆ ಉತ್ತರಿಸಿ) [15]

**4.** Write a note on Bond. Explain types of Foreign and Indian Bonds. (Not more than **500** words)

ಬಂಧ ಪತ್ರದ (Bond) ಬಗ್ಗೆ ಟಿಪ್ಪಣಿ ಬರೆಯಿರಿ. ವಿದೇಶೀಯ ಮತ್ತು ಭಾರತೀಯ ಬಂಧ ಪತ್ರದ (Bond) ಪ್ರಕಾರಗಳನ್ನು ತಿಳಿಸಿ. (**500** ಪದಗಳಿಗೆ ಮೀರದಂತೆ ಉತ್ತರಿಸಿ) [30]

**5.** XY Limited needs Rs. 10,00,000 for the establishment of a new factory. The new factory is expected to yield an annual EBIT of Rs. 1,60,000. In choosing a financial plan, XY Limited has an objective of maximising earnings per share. It is considering the possibility of issuing equity shares and rising debt of Rs.1,00,000 or Rs. 4,00,000 or Rs. 6,00,000. The current market price per share is Rs.25 and is expected to drop to Rs.20, if the funds are borrowed in excess of Rs.5,00,000. Funds can be borrowed at the rates indicated below:

Up to Rs.1,00,000 at 8%
Over Rs. 1,00,000 to Rs 5,00,000 at 12%
Over Rs. 5,00,000 at 18%

Assume a tax rate of 50%. Determine the EPS for the three financing alternatives.

XY ಲಿಮಿಟೆಡ್‌ಗೆ ಹೊಸ ಫ್ಯಾಕ್ಟರಿ ಒಂದನ್ನು ಸ್ಥಾಪಿಸಲು ರೂ. 10,00,000 ಅವಶ್ಯಕವಿದೆ. ಹೊಸ ಫ್ಯಾಕ್ಟರಿಯಿಂದ ವಾರ್ಷಿಕವಾಗಿ ರೂ. 1,60,000 ಗಳ EBIT ಅನ್ನು ನಿರೀಕ್ಷಿಸಲಾಗಿದೆ. ಒಂದು ಹಣಕಾಸಿನ ಯೋಜನೆಯನ್ನು ಆಯ್ಕೆ ಮಾಡುವಾಗ, XY ಲಿಮಿಟೆಡ್‌ನ ಧ್ಯೇಯವು ಪ್ರತಿ ಷೇರಿನ ಸಂಪಾದನೆಯನ್ನು ಗರಿಷ್ಠಗೊಳಿಸುವುದಾಗಿದೆ. ಇದು ಈಕ್ವಿಟಿ ಷೇರುಗಳನ್ನು ನೀಡುವ ಹಾಗೂ ರೂ. 1,00,000 ಅಥವಾ ರೂ. 4,00,000 ಅಥವಾ ರೂ. 6,00,000 ಗಳ ಸಾಲವನ್ನು ಸಂಗ್ರಹಿಸುವ ಸಾಧ್ಯತೆಯನ್ನು ಪರಿಗಣಿಸುತ್ತದೆ. ಪ್ರತಿ ಷೇರಿನ ಪ್ರಸಕ್ತ ಮಾರುಕಟ್ಟೆ ಬೆಲೆಯು ರೂ. 25 ಇದ್ದು, ಒಂದು ವೇಳೆ ಸಾಲ ಸಂಗ್ರಹವು ರೂ. 5,00,000 ಮೀರಿದಲ್ಲಿ ಷೇರಿನ ಮಾರುಕಟ್ಟೆ ಬೆಲೆ ರೂ. 20ಕ್ಕೆ ಕುಸಿಯುತ್ತದೆ ಎಂದು ನಿರೀಕ್ಷಿಸಲಾಗಿದೆ. ನಿಧಿ (funds) ಯನ್ನು ಕೆಳಗೆ ಸೂಚಿಸಿರುವ ದರಗಳಲ್ಲಿ ಸಾಲವನ್ನು ಪಡೆಯಬಹುದು.

ರೂ. 1,00,000 ವರೆಗೆ 8%ನಲ್ಲಿ

ರೂ. 1,00,000 ರಿಂದ ಮೇಲ್ಪಟ್ಟು ರೂ.5,00,000 ವರೆಗೆ 12%ನಲ್ಲಿ

ರೂ. 5,00,000 ರಿಂದ ಮೇಲ್ಪಟ್ಟು 18% ನಲ್ಲಿ

50% ತೆರಿಗೆ ದರವನ್ನು ಊಹಿಸಿ. ಮೂರು ಹಣಕಾಸು ಪರ್ಯಾಯಗಳಿಗೆ EPS ನಿರ್ಧರಿಸಿ. [30]

**6.** Explain various ethical issues related to business. (Not more than **250** words)
ವ್ಯವಹಾರಕ್ಕೆ ಸಂಬಂಧಪಟ್ಟ ವಿವಿಧ ನೀತಿ ನಿಯಮ (ethical issues) ಗಳನ್ನು ವಿವರಿಸಿ. (**250** ಪದಗಳಿಗೆ ಮೀರದಂತೆ ಉತ್ತರಿಸಿ) [15]

**7.** Explain the provisions relating to set off and carry forward of losses of companies. (Not more than **250** words)

ಕಂಪನಿಯ ನಷ್ಟಗಳನ್ನು ಒಂದಕ್ಕೊಂದು ವಜಾ ಮಾಡುವ ಹಾಗೂ ಮುಂದಕ್ಕೊಯ್ಯುವ ಸಂಬಂಧದ ಉಪಬಂಧಗಳನ್ನು ವಿವರಿಸಿ. (**250** ಪದಗಳಿಗೆ ಮೀರದಂತೆ ಉತ್ತರಿಸಿ) [15]

**8.** Define Savings. Is there any relationship among consumption, savings and investment pattern in determining the growth of an economy? (Not more than **250** words)

ಉಳಿತಾಯವನ್ನು ಪರಿಭಾಷಿಸಿ. ಆರ್ಥಿಕತೆಯ ಬೆಳವಣಿಗೆಯನ್ನು ನಿರ್ಧರಿಸುವಲ್ಲಿ ಅನುಭೋಗ, ಉಳಿತಾಯ ಮತ್ತು ಹೂಡಿಕೆಗಳ ಮಾದರಿಯ ನಡುವೆ ಏನಾದರೂ ಸಂಬಂಧವಿದೆಯೇ? (**250** ಪದಗಳಿಗೆ ಮೀರದಂತೆ ಉತ್ತರಿಸಿ) [15]

**9.** Briefly explain the various investment evaluation techniques. (Not more than **250** words)

ಹೂಡಿಕೆ ಮೌಲ್ಯಮಾಪನದ ವಿವಿಧ ತಂತ್ರಗಳನ್ನು ಸಂಕ್ಷಿಪ್ತವಾಗಿ ವಿವರಿಸಿ. (**250** ಪದಗಳಿಗೆ ಮೀರದಂತೆ ಉತ್ತರಿಸಿ) [15]

**10.** Define macro-economics. Bring out the importance of macro-economics and its interface with business and industries. (Not more than **500** words)

ವಿಶಾಲಾತ್ಮಕ-ಅರ್ಥಶಾಸ್ತ್ರವನ್ನು ಪರಿಭಾಷಿಸಿ. ವಿಶಾಲಾತ್ಮಕ-ಅರ್ಥಶಾಸ್ತ್ರದ ಪ್ರಾಮುಖ್ಯತೆಯನ್ನು ಹಾಗೂ ವ್ಯವಹಾರ ಮತ್ತು ಕೈಗಾರಿಕೆಗಳೊಂದಿಗಿನ ಅದರ ಅಂತರ್ ಸಂಪರ್ಕವನ್ನು ನಿರೂಪಿಸಿ. (**500** ಪದಗಳಿಗೆ ಮೀರದಂತೆ ಉತ್ತರಿಸಿ) [30]

**11.** "The profit maximization is not an operationally feasible criterion." Do you agree? Illustrate your views. (Not more than **250** words)

"ಲಾಭ ಗರಿಷ್ಠೀಕರಣವು ಕಾರ್ಯಾಚರಣೆಯ ಕಾರ್ಯಸಾಧ್ಯ ಮಾನದಂಡವಲ್ಲ". ನೀವು ಒಪ್ಪಿಕೊಳ್ಳುತ್ತೀರಾ? ನಿಮ್ಮ ದೃಷ್ಟಿಕೋನದೊಂದಿಗೆ ವಿವರಿಸಿ. (**250** ಪದಗಳಿಗೆ ಮೀರದಂತೆ ಉತ್ತರಿಸಿ) [15]

**12.** What are the functions of Reserve Bank of India in controlling the credit creation and credit control? (Not more than **250** words)

ಸಾಲವನ್ನು ಸೃಷ್ಟಿಸುವಲ್ಲಿ ಮತ್ತು ಸಾಲವನ್ನು ನಿಯಂತ್ರಿಸುವುದರಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಕಾರ್ಯಗಳು ಯಾವುವು? (**250** ಪದಗಳಿಗೆ ಮೀರದಂತೆ ಉತ್ತರಿಸಿ) [15]

**13.** Discuss the role of SEBI in setting up of laws for the welfare of the investors. Explain the Clause 49 of SEBI on Listing Agreement. (Not more than **250** words)

ಹೂಡಿಕೆದಾರರ ಕಲ್ಯಾಣಕ್ಕಾಗಿ ಕಾನೂನುಗಳನ್ನು ರೂಪಿಸುವಲ್ಲಿ ಸೆಬಿ (SEBI) ಯ ಪಾತ್ರವನ್ನು ಚರ್ಚಿಸಿ. ಪಟ್ಟಿ ಒಪ್ಪಂದದ ಕುರಿತು ಸೆಬಿಯ 49ನೇ ಷರತ್ತನ್ನು ವಿವರಿಸಿ. (**250** ಪದಗಳಿಗೆ ಮೀರದಂತೆ ಉತ್ತರಿಸಿ) [15]

**14.** Analyze the impact of social and cultural factors on the Indian business in global context. (Not more than **250** words)

ಜಾಗತಿಕ ಮಟ್ಟದಲ್ಲಿ ಭಾರತೀಯ ವ್ಯವಹಾರದ ಮೇಲೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳ ಪ್ರಭಾವವನ್ನು ವಿಶ್ಲೇಷಿಸಿ. (**250** ಪದಗಳಿಗೆ ಮೀರದಂತೆ ಉತ್ತರಿಸಿ) [15]

**15.** Define multiplier. Bring out the significance and limitations of multiplier. (Not more than **250** words)

ಗುಣಕ (Multiplier) ವನ್ನು ವ್ಯಾಖ್ಯಾನಿಸಿ. ಗುಣಕದ (Multiplier) ಪ್ರಾಮುಖ್ಯತೆ ಮತ್ತು ಮಿತಿಗಳನ್ನು ವಿವರಿಸಿ. (**250** ಪದಗಳಿಗೆ ಮೀರದಂತೆ ಉತ್ತರಿಸಿ) [15]

* * *